**ದಿನಾಂಕ 09-09-2022** **ಓ.ಎಸ್. ನಂ. 175/2016**

**ಪಿ.ಡಬ್ಲ್ಯೂ – 1**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಪ್ರತಿವಾದಿಯ ಮಗನಾದ ಮಲಿಕಜಾನ ಕೀರ್ತಿ ಫೈನಾನ್ಸಗೆ ದಿಃ 22-04-2015 ರವರೆಗೆ ವತ್ತಿ ಹಣವನ್ನು ತುಂಬುತ್ತಾ ಬಂದಿರುವನು ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆತನ ಕೆಲಸ ಕಡಿಮೆ ಆದ ಕಾರಣ ಆತನಿಗೆ ಬಡ್ಡಿ ಕಟ್ಟಲು ಆಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದ ಕಾರಣ ನಾನು ಪ್ರತಿವಾದಿಗೆ ಸಾಲ ಮರುಪಾವತಿ ಮಾಡಲು 6 ತಿಂಗಳು ಕಾಲಾವಕಾಶ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ 6 ತಿಂಗಳ ಅವಧಿಯಲ್ಲಿ ನಾನು ಪ್ರತಿವಾದಿಗೆ ನೋಟಿಸು ನೀಡಿದ್ದೇನೆ ಎಂದರೆ ಸರಿ. ಆ ಸಮಯದಲ್ಲಿ ಅವನಿಗೆ ಈ ಕೇಸಿನ ಖರೀದಿ ಸಂಚಗಾರ ಕರಾರು ಪತ್ರದ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮಕ್ಕಳು ನನ್ನ ಬಳಿ ಬಂದು ನಾವು ಖರೀದಿ ಕರಾರು ಕಾಗದ ಮಾಡಿ ಕೊಟ್ಟಿರುವುದಿಲ್ಲ ಮತ್ತು ನೀವು ಅದನ್ನು ಸೃಷ್ಟಿ ಮಾಡಿದ್ದೀರಿ ಎಂದು ಹೇಳಿದಾಗ ನಾನು ಬಾಕಿ ಉಳಿದ ಹಣವನ್ನು ವಾಪಾಸು ಕೊಟ್ಟರೆ ಭದ್ರತೆಗಾಗಿ ಮಾಡಿಕೊಂಡಿರುವ ಖರೀದಿ ಕರಾರು ಪತ್ರದ ಮೇಲೆ ಕ್ರಮ ಕೈಗೊಳ್ಳುವುದಿಲ್ಲ ಎಂದು ಅವರ ಬಳಿ ಹೇಳಿದ್ದೇನೆ ಎಂದರೆ ಸರಿಯಲ್ಲ ಮತ್ತು ನಾನು ಅದನ್ನು ವಾಪಾಸು ಕೊಡುತ್ತೇನೆ ಎಂದು ಅವರ ಬಳಿ ಹೇಳಿದ್ದೇನೆ ಎಂದರೆ ಸರಿಯಲ್ಲ . ದಾವಾ ಸ್ವತ್ತನ್ನು ಮಾರಾಟ ಮಾಡುತ್ತೇವೆ ಎಂದು ಪ್ರತಿವಾದಿ ಎಂದಿಗೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ . 2014 ರಲ್ಲಿ ದಾವಾ ಸ್ವತ್ತಿನ ಕಿಮ್ಮತ್ತು 10 ಲಕ್ಷ ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ಕೇವಲ 1,75,000/- ರೂಪಾಯಿಗೆ ಮಾರಾಟ ಮಾಡಲು ಒಪ್ಪುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಪ್ರತಿವಾದಿ ನನಗೆ 1 ಲಕ್ಷ ರೂ. ಕೊಡಲು ತಯಾರಿರುವನು ಎಂದರೆ ಸಾಕ್ಷಿಯು ಖರೀದಿ ಪತ್ರ ಬರೆದುಕೊಡಬೇಕೆಂದು ನುಡಿದರು. ದಾವಾ ಸ್ವತ್ತನು ಕಬಳಿಸಲು ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಹಿರಿಯರು ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತಾರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ರೂ. 75,000/- ಮುಂಗಡವಾಗಿ ನಾನು ಪ್ರತಿವಾದಿಗೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿದ ಕಾರಣ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ ಮತ್ತು ಪ್ರ.ದ.ನ್ಯಾದಂ.ನ್ಯಾಬೈಲಹೊಂಗಲ OS